ಸರ್ಕಾರ ಕೈಗೊಂಡ ಕೆಲವು ಮುನ್ನೆಚ್ಚರಿಕೆ ಕ್ರಮಗಳಿಂದ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಾಗಿ ಬೇರೆ ರಾಜ್ಯಗಳಿಗೆ ಪೂರೈಸುವ ಸ್ಥಿತಿಗೆ ತಲುಪಿದ್ದೇವೆ.

● **ಕೆ.ಜೆ.ಜಾರ್ಜ್** ಇಂಧನ ಸಚಿವರು.

ಕನ್ನಡಪ್ರಭ
ಶುಕ್ರವಾರ 9.08.2024

ಸುದ್ದಿ ಸಿಂಚನ

ಪ್ರವಾಸಿ ತಾಣಗಳ ಜನತಾ ಆಯ್ಕೆಗೆ ಅವಕಾಶ

ಚಿಕ್ಕಬಳ್ಳಾಪುರ: ಪ್ರವಾಸೋದ್ಯಮವನ್ನು ಇನ್ನಷ್ಟು ಮೇಲ್ದರ್ಜೆಗೇರಿಸಲು ಪ್ರಮುಖ ಪ್ರವಾಸಿ ತಾಣಗಳನ್ನು ಸಾರ್ವಜನಿಕರೇ ಗುರುತಿಸಿ, ವಿಶ್ವ ದರ್ಜೆಯಲ್ಲಿ ಅಭಿವೃದ್ಧಿ ಪಡಿಸಲು ಕೇಂದ್ರ ಸಚಿವಾಲಯದಿಂದ ದೇಕೋ ಅಪ್ನ ದೇಶ್, ಪೀಪಲ್ಸ್ ಚಾಯ್ಸ್ 2024 ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಲಾಗಿದೆ. ಈ ಕಾರ್ಯಕ್ರಮದ ಭಾಗವಾಗಿ ನಾಗರಿಕರು, ಪ್ರವಾಸಿಗರು ಆದ್ಯತೆಯ ಪ್ರವಾಸಿ ತಾಣಗಳನ್ನು ಆಯ್ಕೆ ಮಾಡಲು ಮೈಗೌ ವೇದಿಕೆಯಡಿ ಅವಕಾಶ ಕಲ್ಪಿಸಿದ್ದು, ನಾಗರಿಕರು, ಪ್ರವಾಸಿಗರು ಆದ್ಯತೆಯ ಪ್ರವಾಸಿ ತಾಣಗಳನ್ನು ಆಯ್ಕೆ ಮಾಡಲು ಸೆಪ್ಟೆಂಬರ್15 ರವರೆಗೆ ವೋಟ್ ಮಾಡುವ ಅವಕಾಶ ನೀಡಲಾಗಿದೆ. ಈ ಕ್ಯಾಂಪೇನ್ ನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಪ್ರವಾಸಿ ತಾಣಗಳು ಆಯ್ಕೆಗೊಳ್ಳುವಂತೆ ವ್ಯಾಪಕ ಪ್ರಚಾರಗೊಳಿಸಲು ಕ್ಯಾಂಪೇನ್ ಲಿಂಕ್ https://innovateindia.mygov.in/dekho&apna&desh/ ನಲ್ಲಿ ಲಾಗಿನ್ ಮಾಡಿ ವೋಟಿಂಗ್ ಮಾಡುವಂತೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯ ಅಧ್ಯಕ್ಷ ಪಿ.ಎನ್. ರವೀಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಧುವನ್ನು ಕೊಲೆ ಮಾಡಿದ ವರನ ಸಾವು

ಕೆಜಿಎಫ್: ಪರಸ್ಪರ ಪ್ರೀತಿಸಿ ಬುಧವಾರ ಬೆಳಗ್ಗೆ ಮದುವೆಯಾಗಿ ಸಂಜೆಯ ವೇಳೆಗೆ ಪರಸ್ಪರ ಮಚ್ಚಿನಿಂದ

ಹಲ್ಲೆ ಮಾಡಿಕೊಂಡಿದ್ದ ನವ ವಧು ವರರಲ್ಲಿ ವಧು ಕೆಜಿಎಫ್‌ನ ಸರ್ಕಾರಿ ಆಸ್ಪತ್ರೆಯಲ್ಲಿ ಮೃತಪಟ್ಟರೆ, ಗಂಭೀರವಾಗಿ ಗಾಯಗೊಂಡಿದ್ದ ವರ ಬೆಂಗಳೂರಿನ ನಿಮಾನ್ಸ್ ಆಸ್ಪತ್ರೆಯಲ್ಲಿ ಗುರುವಾರ ಬೆಳಗ್ಗೆ ಮೃತಪಟ್ಟಿದ್ದಾನೆ. ತಾಲೂಕಿನ ಚಂಬರಸನಹಳ್ಳಿ ಗ್ರಾಮದಲ್ಲಿ ಬುಧವಾರ ಬೆಳಗ್ಗೆ ವಧು ಲಿಖಿತಾ ಶ್ರೀ(18) ವರ ನವೀನ್ ಕುರ್ಮಾ(30) ನಡುವೆ ಮದುವೆಯಾಗಿತ್ತು. ಪರಸ್ಪರ ಪ್ರೀತಿಸಿ ಎರಡೂ ಕಡೆಯ ಹಿರಿಯರ ಸಮ್ಮುಖದಲ್ಲಿ ಮದುವೆ ಸಮಾರಂಭ ನಡೆದಿತ್ತು. ಬಳಿಕ ಇಬ್ಬರೂ ಪರಸ್ಪರ ಮಚ್ಚಿನಿಂದ ಹೊಡೆದಾಡಿಕೊಂಡು ಆಸ್ಪತ್ರೆ ಸೇರಿದ್ದರು. ಲಿಖಿತಾ ಶ್ರೀ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದುದರಿಂದ ಗುರುವಾರ ಕಾಲೇಜಿಗೆ ರಜೆ ಘೋಷಿಸಲಾಗಿತ್ತು. ಲಿಖಿತಾ ಶ್ರೀ ಅಂತ್ಯಕ್ರಿಯೆ ಸ್ವಗ್ರಾಮ ಬೈನೇಪಲ್ಲಿಯಲ್ಲಿ, ನವೀನ್ ಕುಮಾರ್ ಅಂತ್ಯಕ್ರಿಯೆ ಚಂಬರಸನಹಳ್ಳಿಯಲ್ಲಿ ನಡೆಯಿತು.

ಸೌರ ವಿದ್ಯುತ್ ಉತ್ಪಾದನೆಗೆ ಶೇ.80ರಷ್ಟು ಸಬ್ಸಿಡಿ

ಕೃಷಿ ಪಂಪ್‌ಸೆಟ್‌ಗೆ ಸೌರ ವಿದ್ಯುತ್ | ರೈತರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಇಂಧನ ಸಚಿವ ಕೆ.ಜೆ.ಜಾರ್ಜ್ ಮನವಿ

● **ಕನ್ನಡಪ್ರಭ ವಾರ್ತೆ** ಚಿಕ್ಕಬಳ್ಳಾಪುರ

ಕೇಂದ್ರ ಮತ್ತು ರಾಜ್ಯ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ''ಕುಸುಮ ಸೌರ ವಿದ್ಯುತ್ ಬಿ ಮತ್ತು ಸಿ ಯೋಜನೆ''ಯ ಅನುಷ್ಠಾನವು ನಮ್ಮ ರಾಜ್ಯದ ರೈತರ ವಿದ್ಯುತ್ ಬೇಡಿಕೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲಿದೆ ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ತಿಳಿಸಿದರು.

ಜಿಲ್ಲಾಡಳಿತ ಭವನದ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಗುರುವಾರ ನಡೆದ ಇಂಧನ ಇಲಾಖೆಯ ವಿಷಯಗಳ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅಧಿಕಾರಿಗಳಿಂದ ಮಾಹಿತಿ ಪಡೆದು ನಂತರ ಸುದ್ದಿಗಾರರೊಂದಿಗೆ ಮಾತನಾಡಿದರು.

ಸೌರ ವಿದ್ಯುತ್ ಯೋಜನೆ ಅನುಷ್ಠಾನ: ಸರ್ಕಾರ ಕೈಗೊಂಡ ಕೆಲವು ಮುನ್ನೆಚ್ಚರಿಕೆ ಕ್ರಮಗಳಿಂದ ರಾಜ್ಯದಲ್ಲಿ ವಿದ್ಯುತ್ ಉತ್ಪಾದನೆ ಹೆಚ್ಚಾಗಿ ಬೇರೆ ರಾಜ್ಯಗಳಿಗೆ ಪೂರೈಸುವ ಸ್ಥಿತಿಗೆ ತಲುಪಿದ್ದೇವೆ.. ಹೀಗೆಯೇ ಮುಂದುವರೆಸಿದರೆ ರಾಜ್ಯವು ವಿದ್ಯುತ್ ಉತ್ಪಾದನೆಯಲ್ಲಿ ಮೊದಲನೆ ಸ್ಥಾನಕ್ಕೆ ಬರಲಿದೆ. ಆ ನಿಟ್ಟಿನಲ್ಲಿ ನಮ್ಮ ಸರ್ಕಾರ ಕುಸುಮ ಸೌರ ವಿದ್ಯುತ್ ಯೋಜನೆಯನ್ನು ರಾಜ್ಯದಾದ್ಯಂತ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಮುಂದಾಗಿ

ಚಿಕ್ಕಬಳ್ಳಾಪುರ ಜಿಪಂ ಸಭಾಂಗಣದಲ್ಲಿ ನಡೆದ ಇಂಧನ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವ ಕೆ.ಜೆ. ಜಾರ್ಜ್ ಮಾತನಾಡಿದರು.

ಸಹಾಯಧನವನ್ನು ಹೆಚ್ಚಿಸಿದೆ ಎಂದರು.

ಶೇ. 80 ರಷ್ಟು ಸಹಾಯಧನ: ಪ್ರಸ್ತುತ ರಾಜ್ಯ ಸರ್ಕಾರ ಶೇ. 50 ರಷ್ಟು ಸಹಾಯಧನ ನೀಡಲು ಸಚಿವ ಸಂಪುಟದಲ್ಲಿ ತೀರ್ಮಾನಿಸಲಾಗಿದೆ. ಈ ಯೋಜನೆಗೆ ಕೇಂದ್ರ ಸರ್ಕಾರ ಶೇ. 30 ರಷ್ಟು ಸಹಾಯಧನ ನೀಡುತ್ತಿದ್ದು, ಪ್ರಸ್ತುತ ರಾಜ್ಯದಲ್ಲಿ ಒಟ್ಟು ಶೇ. 80 ರಷ್ಟು ಸಹಾಯಧನವನ್ನು ಕುಸುಮ ಯೋಜನೆಯಡಿ ರೈತರ ನೀರಾವರಿ ಉದ್ದೇಶಗಳಿಗೆ ನೀಡಲು ಮುಂದಾಗಿದೆ. ಈ ಯೋಜನೆಯ ಅನುಷ್ಠಾನಗೊಂಡಲ್ಲಿ ರೈತರ ವಿದ್ಯುತ್ ಬೇಡಿಕೆಯ ಎಲ್ಲ ಸಮಸ್ಯೆಗಳು ಪರಿಹಾರವಾಗಲಿದೆ. ಜೊತೆಗೆ ಮುಂದಿನ ದಿನಗಳಲ್ಲಿ ವಿದ್ಯುತ್ ಕೊರತೆಯ ಸಂಕಷ್ಟಕ್ಕೆ ರಾಜ್ಯ ಸಿಲುಕದಂತೆ ಕಾಪಾಡಬಹುದಾಗಿದೆ. ಆದ್ದರಿಂದ ರೈತರು ಆನ್ ಲೈನ್ ಮೂಲಕ ಈ ಯೋಜನೆಯಡಿ ಅರ್ಜಿ ಹಾಕಿಕೊಳ್ಳಲು ಮನವಿ ಮಾಡಿದರು.

ಕುಸುಮ ಸೌರ ವಿದ್ಯುತ್ ಯೋಜನೆಯಡಿ ನೋಂದಾಯಿತ ರೈತರಿಗೆ ಕೊಳವೆ ಬಾವಿ ಮತ್ತು ನೀರು ಇದ್ದಲ್ಲಿ ಸೌರ ವಿದ್ಯುತ್ ಪಂಪ್ ಸೆಟ್ ಮತ್ತು ಪ್ಯಾನಲ್ ಬೋರ್ಡ್ ಸಹಿತ ಇತರ ಪರಿಕರಗಳನ್ನು ಸರ್ಕಾರ ನೀಡಲಿದೆ. ಅದಕ್ಕಾಗಿ ಅರ್ಹ ಹಾಗೂ ಮಾನ್ಯತೆಪಡೆದಗುತ್ತಿಗೆದಾರರನ್ನುಗುರ್ತಿಸಲಾಗಿದೆ. ಜೊತೆಗೆ ಸ್ಥಳೀಯವಾಗಿ 4-5 ಮೆಗಾವ್ಯಾಟ್ ಸೌರ ವಿದ್ಯುತ್ ಉತ್ಪಾದಿಸಲು ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸಲು ಚಿಕ್ಕಬಳ್ಳಾಪುರ ಜಿಲ್ಲೆಯಾದ್ಯಂತ 871 ಎಕರೆ ಜಾಗವನ್ನು ಗುರ್ತಿಸಿ ನೀಡುವಂತೆ ತಿಳಿಸಲಾಗಿದೆ ಎಂದರು.

ಸ್ಥಳೀಯವಾಗಿ ವಿದ್ಯುತ್ ವಿತರಣೆ: ಈ ರೀತಿ ಉತ್ಪಾದನೆಯಾದ ವಿದ್ಯುತ್ ನ್ನು ವಿದ್ಯುತ್ ಉಪ ಕೇಂದ್ರದಿಂದ 500 ಮೀಟರ್‌ಅಂತರದ ಸ್ಥಳೀಯ ರೈತರಿಗೆ, ಸರ್ಕಾರಿ ಶಾಲೆ, ಅಂಗನವಾಡಿಗಳು ಹಾಗೂ ಇತರ ಸರ್ಕಾರಿ ಕಚೇರಿಗಳಿಗೆ ವಿದ್ಯುತ್ ಅನ್ನು ಪೂರೈಸಲಾಗುವುದು. ಉಳಿದ ವಿದ್ಯುತ್ ಅನ್ನು ಗ್ರಿಡ್‌ಗಳ ಮೂಲಕ ಬೇರೆ ಉದ್ದೇಶಗಳಿಗೆ ಬಳಸಿಕೊಳ್ಳುವ ಗುರಿ ಹೊಂದಲಾಗಿದೆ ಎಂದರು.

ದಿಬ್ಬೂರು ಮತ್ತು ಕೇತೇನಹಳ್ಳಿ ಮಾರ್ಗದಲ್ಲಿ ವಿದ್ಯುತ್ ವ್ಯತ್ಯಯದ ಸಮಸ್ಯೆಯು ಹೆಚ್ಚಿರುವುದು ಗಮನಕ್ಕೆ ಬಂದಿದೆ. ಈ ತಿಂಗಳ 31ನೇ ತಾರೀಖಿನ ಒಳಗಾಗಿ ಆ ಸಮಸ್ಯೆಯನ್ನು ಪರಿಹರಿಸಿ ನಿರಂತರವಾಗಿ ವಿದ್ಯುತ್ ಪೂರೈಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ. ಗೌರಿಬಿದನೂರಿನಲ್ಲಿ ವಿಭಾಗೀಯ ಕಚೇರಿಯನ್ನು ಮತ್ತು 220 ಕೆ.ವಿ. ಸಾಮರ್ಥ್ಯದ ವಿದ್ಯುತ್ ಉಪಕೇಂದ್ರ ತೆರೆಯಲು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದರು.

ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಂ.ಸಿ ಸುಧಾಕರ್, ಶಾಸಕರಾದ ಪ್ರದೀಪ್ ಈಶ್ವರ್, ಕೆ.ಹೆಚ್ ಪುಟ್ಟಸ್ವಾಮಿ ಗೌಡ, ಇಂಧನ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ,ಕ.ವಿ.ಪ್ರ.ನಿ.ನಿಗಮದ ವ್ಯವಸ್ಥಾಪಕ ನಿರ್ದೇಶಕ ಪಂಕಜ್ ಕುಮಾರ್‌ಪಾಂಡೆ, ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ್ ಬೀಳಗಿ, ಬೆ.ವಿ.ಕಂ (ತಾಂತ್ರಿಕ) ನಿರ್ದೇಶಕ ಹೆಚ್.ಜೆ. ರಮೇಶ್, ಜಿಲ್ಲಾಧಿಕಾರಿ ಪಿ.ಎನ್ ರವೀಂದ್ರ, ಜಿ.ಪಂ. ಸಿಇಓ ಪ್ರಕಾಶ್ ಜಿ.ಟಿ.ನಿಟ್ಟಾಲಿ, ಎಸ್ಪಿ ಕುಶಲ್ ಚೌಕ್ಸೆ, ಡಿಸಿಎಫ್ ಓ ಬಿ.ಆರ್‌ರಮೇಶ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಇದ್ದರು.

ಅಧ್ಯಯನದಿಂದ ವೃತ್ತಿ ನೈಪುಣ್ಯತೆ ವೃದ್ಧಿ

ಬೀಳ್ಕೊಡುಗೆ ಸಮಾರಂಭದಲ್ಲಿ ನ್ಯಾಯಾಧೀಶ ಬಿ.ಕೇಶವಮೂರ್ತಿ ಅಭಿಮತ

● **ಕನ್ನಡಪ್ರಭ ವಾರ್ತೆ** ಕೋಲಾರ

ನ್ಯಾಯ ನಿರ್ಣಯದಲ್ಲಿ ವಕೀಲರ ಪಾತ್ರ ಅತಿ ಪ್ರಮುಖವಾಗಿದ್ದು, ವೃತ್ತಿ ನೈಪುಣ್ಯತೆ ರೂಢಿಸಿಕೊಳ್ಳಲು ನಿರಂತರ ಅಧ್ಯಯನ ಅಗತ್ಯವಿದೆ ಎಂದು ಬಂಗಾರಪೇಟೆಯ ಸಿವಿಲ್ ನ್ಯಾಯಾಧೀಶರಾಗಿದ್ದು, ಇದೀಗ ಪದೋನ್ನತಿ ಹೊಂದಿ ಬೆಂಗಳೂರಿಗೆ ಹಿರಿಯ ಸಿವಿಲ್ ನ್ಯಾಯಾಧೀಶರಾಗಿ ವರ್ಗಾವಣೆಯಾಗಿರುವ ಬಿ.ಕೇಶವಮೂರ್ತಿ ಕರೆ ನೀಡಿದರು. ಬಂಗಾರಪೇಟೆ ಸಿವಿಲ್ ನ್ಯಾಯಾಧೀಶರಾಗಿದ್ದು, ಇದೀಗ ಬೆಂಗಳೂರಿಗೆ ಪದೋನ್ನತಿ ಪಡೆದು ಸೀನಿಯರ್‌ಸಿವಿಲ್ ಜಡ್ಜ್ ಆಗಿ ವರ್ಗಾವಣೆಗೊಂಡಿರುವ ಅವರನ್ನು ಬಂಗಾರಪೇಟೆ ತಾಲ್ಲೂಕು ವಕೀಲರ ಸಂಘದಿಂದ ಆತ್ಮೀಯವಾಗಿ ಸನ್ಮಾನಿಸಿ ಬೀಳ್ಕೊಟ್ಟ ಸಂದರ್ಭದಲ್ಲಿ ಮಾತನಾಡಿದರು.

ಅಧ್ಯಯನದಿಂದ ವೃತ್ತಿ ನೈಪುಣ್ಯತೆ ಅಧ್ಯಯನಕ್ಕೆ ಕೊನೆಯೇ ಇಲ್ಲ, ಕಾನೂನಿನ

ಬಂಗಾರಪೇಟೆ ಸಿವಿಲ್ ನ್ಯಾಯಾಧೀಶರಾಗಿದ್ದು, ಪದೋನ್ನತಿ ಪಡೆದು ವರ್ಗಾವಣೆಗೊಂಡಿರುವ ನ್ಯಾ.ಬಿ.ಕೇಶವಮೂರ್ತಿ ಅವರನ್ನು ವಕೀಲರ ಸಂಘದಿಂದ ಆತ್ಮೀಯವಾಗಿ ಸನ್ಮಾನಿಸಲಾಯಿತು.

ಅಗಲ, ಆಳ ಅರಿತಷ್ಟು ವಕೀಲರ ವೃತ್ತಿ ನೈಪುಣ್ಯತೆ ಹೆಚ್ಚುತ್ತದೆ, ಈ ನಿಟ್ಟಿನಲ್ಲಿ ವಕೀಲರು ಕಕ್ಷಿದಾರರ ಹಿತ ರಕ್ಷಣೆಗೆ ತಮ್ಮ ಪ್ರಯತ್ನಯಶಸ್ವಿಯಾಗಿಮುಂದುವರಿಸಬೇಕು ಎಂದು ಅಭಿಪ್ರಾಯಪಟ್ಟರು.

ಲೋಕಅದಾಲತ್, ಜನತಾ ನ್ಯಾಯಾಲಯ ಪ್ರಕ್ರಿಯೆಗಳು ಯಶಸ್ವಿಯಾಗಿ ಪ್ರಕರಣಗಳ ಇತ್ಯರ್ಥದಲ್ಲಿ ವಕೀಲರ ಸಹಕಾರ ಮುಖ್ಯವಾಗಿದೆ, ಕಕ್ಷಿದಾರರ ಅಲೆದಾಟ ತಪ್ಪಿಸಿ ಶೀಘ್ರ ನ್ಯಾಯ ಸಿಗುವಂತೆ ಮಾಡಲು ಇರುವ ಅತ್ಯುತ್ತಮ ಮಾರ್ಗವಾದ ಲೋಕ ಅದಾಲತ್‌ನಲ್ಲಿ ಹೆಚ್ಚು ಪ್ರಕರಣ ಇತ್ಯರ್ಥಕ್ಕೆ ವಕೀಲರು ಸಹಕರಿಸಬೇಕು ಎಂದು ಮನವಿ ಮಾಡಿದರು. ಇದೇ ಸಂದರ್ಭದಲ್ಲಿ ನ್ಯಾಯಾಧೀಶರಾದ ಕೇಶವಮೂರ್ತಿ, ಪತ್ನಿ ಅಶ್ವಿನಿ ದಂಪತಿಗಳನ್ನು ಸನ್ಮಾನಿಸಲಾಯಿತು.

ಗುರುಭವನ ಭರವಸೆ ಅಲ್ಲ, ಗ್ಯಾರಂಟಿ

ಮಾಲೂರು ಪಟ್ಟಣದ ಮಾರುತಿ ಬಡಾವಣೆಯಲ್ಲಿರುವ ಶಿಕ್ಷಣ ಇಲಾಖೆಯ ನಿವೇಶನದಲ್ಲಿ ಗುರುಭವನ ಕಟ್ಟಡ ಕಾಮಗಾರಿಗೆ ಶಾಸಕ ಕೆ.ವೈ.ನಂಜೇಗೌಡ ಚಾಲನೆ ನೀಡಿ ಮಾತನಾಡಿದರು.

● **ಕನ್ನಡಪ್ರಭ ವಾರ್ತೆ** ಮಾಲೂರು

ಇನ್ನೊಂದು ವರ್ಷದಲ್ಲಿ ಪಟ್ಟಣದಲ್ಲಿ ಗುರು ಭವನ ನಿರ್ಮಿಸಲಾಗುವುದು. ಇದು ಭರವಸೆ ಅಲ್ಲ ಇದು ನನ್ನ ಗ್ಯಾರಂಟಿ ಎಂದು ಶಾಸಕ ಕೆ.ವೈ.ನಂಜೇಗೌಡ ಹೇಳಿದರು.

ಅವರು ಇಲ್ಲಿನ ಮಾರುತಿ ಬಡಾವಣೆಯಲ್ಲಿರುವ ಶಿಕ್ಷಣ ಇಲಾಖೆಯ ನಿವೇಶನದಲ್ಲಿ ನಿಮಿಸಲಾ ಗುತ್ತಿರುವ ಗುರುಭವನ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿದರು.

₹2.25 ಕೋಟಿ ವೆಚ್ಚದ ಯೋಜನೆ: ಪ್ರಸ್ತುತ ಶಾಸಕರ ಅನುದಾನದಡಿ 25 ಲಕ್ಷ ರೂಗಳನ್ನು ಗುರುಭವನ ಕಾಮಗಾರಿಗೆ ನೀಡಲಾಗುವುದು ಎಂದರು. ಕಳೆದ ಆರು ವರ್ಷಗಳಿಂದ ಸ್ಥಗಿತಗೊಂಡಿದ್ದ ಕಾಮಗಾರಿಗೆ ಚಾಲನೆ ನೀಡಿದ್ದು, ಶಾಸಕರ ಅನುದಾನ, ವಿಧಾನಪರಿಷತ್ ಸದಸ್ಯರ ಅನುದಾನ, ಪುರಸಭೆ ಯೋಜನಾ ಪ್ರಾಧಿಕಾರ, ತಾಲೂಕು ಪಂಚಾಯಿತಿ ಅನುದಾನದ, ಜೊತೆಗೆ ಶಿಕ್ಷಕರ ಸದನದಿಂದ ಬರುವ ಕಲ್ಯಾಣ ನಿಧಿ ಅನುದಾನ, ಸಂಘ ಸಂಸ್ಥೆಗಳು, ಸರ್ಕಾರಿ ನೌಕರರ ಶಿಕ್ಷಕರ ಒಂದು ದಿನದ ವೇತನ ವಂತಿಕೆಯನ್ನು ಬಳಸಿಕೊಂಡು ಸುಮಾರು 2.25 ಕೋಟಿ ವೆಚ್ಚದಲ್ಲಿ ಸುಸಜ್ಜಿತ ಗುರುಭವನ ಕಟ್ಟಡ ಕಾಮಗಾರಿಯನ್ನು ನಿರ್ಮಿಸಲಾಗುವುದು ಎಂದರು.

ಈ ಸಂದರ್ಭದಲ್ಲಿ ಯೋಜನಾ ಪ್ರಾಧಿಕಾರ ಅಧ್ಯಕ್ಷ ನಹೀಂ ಉಲ್ಲಾ ಖಾನ್, ತಾಲ್ಲೂಕು ಕೃಷಿಕ ಸಮಾಜದ ಅಧ್ಯಕ್ಷ ಹನುಮಂತಪ್ಪ, ಪುರಸಭಾ ಸದಸ್ಯರಾದ ಆರ್.ವೆಂಕಟೇಶ್, ಭಾರತೀ ಶಂಕರಪ್ಪ, ಜಾಕೀರ್‌ಖಾನ್, ಇಮ್ತಿಯಾಜ್ ಖಾನ್, ತಹಶೀಲ್ದಾರ್ ಕೆ ರಮೇಶ್, ತಾಪಂ ಇಒ ವಿ ಕೃಷ್ಣಪ್ಪ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂಜಿ ಮಧುಸೂದನ್, ಎಚ್.ಎಂ. ವಿಜಯನರಸಿಂಹ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ವಿ ಮುನೇಗೌಡ, ಮಾಜಿ ಅಧ್ಯಕ್ಷ ಆಂಜಿನಪ್ಪ, ಕ್ಷೇತ್ರ ಶಿಕ್ಷಣಾಧಿಕಾರಿ ಹಾಗೂ ಗುರುಭವನ ಸಮಿತಿ ಅಧ್ಯಕ್ಷ ಎಚ್.ಎಸ್. ಚಂದ್ರಕಲಾ ಹಾಜರಿದ್ದರು.

■ ಶಾಸಕರ ಅನುದಾನದಡಿ 25 ಲಕ್ಷ ರೂಗಳನ್ನು ಗುರುಭವನ ಕಾಮಗಾರಿಗೆ ನೀಡಲಾಗುವುದು. ಒಟ್ಟು 2.25 ಕೋಟಿ ವೆಚ್ಚದಲ್ಲಿ ಕಟ್ಟಡ ನಿರ್ಮಾಣ

ಹನಿ ನೀರಾವರಿಗೆ ಸಬ್ಸಿಡಿ ಸೌಲಭ್ಯಕ್ಕೆ ಅರ್ಜಿ

ಚಿಕ್ಕಬಳ್ಳಾಪುರ:2024-25ನೇಸಾಲಿನಕೇಂದ್ರ ಪುರಸ್ಕೃತಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯನ್ನು ತೋಟಗಾರಿಕೆ ಇಲಾಖೆ, ಗುಡಿಬಂಡೆ ತಾಲ್ಲೂಕಿನ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಸದರಿ ಯೋಜನೆಯಡಿ ಎಲ್ಲಾ ತರಕಾರಿ, ಹೂವಿನ, ಹಣ್ಣಿನ ತೋಟದ ಬೆಳೆಗಳಿಗೆ ಹನಿನೀರಾವರಿ ಪದ್ಧತಿ (ಡ್ರಿಪ್ ಇರಿಗೇಷನ್) ಅಳವಡಿಸುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ರೈತರಿಗೆ ಶೇ.90 ರಷ್ಟು ಹಾಗೂ ಇತರೆ ವರ್ಗದ ರೈತರಿಗೆ ರೈತ ಫಲಾನುಭವಿಯು ಸಹಾಯಧನಕ್ಕೆ ಅರ್ಜಿಗಳನ್ನು ಇಲಾಖೆಯ ಹಸಿರು ಮತ್ತು ಫ್ರೂಟ್ಸ್ ಆನ್ ಲೈನ್ ಮೂಲಕ ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಸಂಬಂಧಪಟ್ಟ ಹೋಬಳಿ ಮತ್ತು ತಾಲ್ಲೂಕು ಮಟ್ಟದ ತೋಟಗಾರಿಕೆ ಇಲಾಖೆ ಕಚೇರಿಯನ್ನು ಸಂಪರ್ಕಿಸುವಂತೆ ಕೋರಲಾಗಿದೆ.

ಕೊಳೆತ ಸ್ಥಿತಿಯಲ್ಲಿ ಶಿಶು ಶವ ಪತ್ತೆ

ಕೆಜಿಎಫ್: ಘಟ್ಟಮಾದಮಂಗಲ ಗ್ರಾಪಂ ವ್ಯಾಪ್ತಿಯ ಚೊಕ್ಕರಬಂಡೆ ಅಂಗನವಾಡಿ ಕೇಂದ್ರದ ಪಕ್ಕದಲ್ಲಿನ ಪಾಳು ಬಿದ್ದಿದ್ದ ಕಟ್ಟಡದಲ್ಲಿ ನವಜಾತ ಶಿಶು ಕೊಳೆತ ಪರಿಸ್ಥಿತಿಯಲ್ಲಿ ಕಂಡು ಬಂದಿದ್ದು ಆಂಡ್ರಸನ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕರ್ನಾಟಕ ಗಡಿ ಭಾಗದ ಚೊಕ್ಕರಬಂಡೆ ಅಂಗನವಾಡಿ ಕೇಂದ್ರದ ಪಕ್ಕದಲ್ಲಿ ಪಾಳು ಬಿದ್ದಿರುವ ಕಟ್ಟಡವವೊಂದರಲ್ಲಿ ಯಾರೋ ನವಜಾತ ಶಿಶುವನ್ನು ಎಸೆದು ಹೋಗಿದ್ದಾರೆ. ಸ್ಥಳಕ್ಕೆ ಆಂಡ್ರಸನ್‌ಪೇಟೆ ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಚಂದ್ರಣ್ಣ ಆಗಮಿಸಿ ಪರಿಶೀಲಿಸಿದರು.

ಸರ್ವಕಾಲಕ್ಕೂ ಸಲ್ಲುವ ಹರ್ಮನ್

ಕೋಲಾರ ತಾಲೂಕಿನ ಮಂಗಸಂದ್ರದ ಬೆಂಗಳೂರು ಉತ್ತರ ವಿವಿ ಸ್ನಾತಕೋತ್ತರ ಕೇಂದ್ರದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾ ದಿನಾಚರಣೆಯಲ್ಲಿ ಪತ್ರಕರ್ತ ಎಂ.ಜಿ.ಪ್ರಭಾಕರ ಮತ್ತು ಎಚ್.ಕೆ.ರಾಘವೇಂದ್ರರನ್ನು ಸನ್ಮಾನಿಸಲಾಯಿತು.

● **ಕನ್ನಡಪ್ರಭ ವಾರ್ತೆ** ಕೋಲಾರ

ಜರ್ಮನಿಯಿಂದ ಕ್ರೈಸ್ತಧರ್ಮ ಪ್ರಚಾರದ ಸಲುವಾಗಿ ಕನ್ನಡನಾಡಿಗೆ ಆಗಮಿಸಿದ ಹರ್ಮನ್ ಮೊಗ್ಲಿಂಗ್ ಮಂಗಳೂರ ಸಮಾಚಾರದ ಮೂಲಕ ಮೊದಲ ಕನ್ನಡ ಪತ್ರಿಕಾ ಸ್ಥಾಪಕ ಮಾತ್ರವಲ್ಲದೆ ಕರ್ನಾಟಕ ಏಕೀಕರಣದಲ್ಲಿ ಹೆಜ್ಜೆಗುರುತು ಮೂಡಿಸಿದ್ದಾರೆ. ಕನ್ನಡ ಪತ್ರಿಕೋದ್ಯಮ ಇರುವ ತನಕ ಕನ್ನಡ ಪತ್ರಿಕ್ಯೋದ್ಯಮದ ಪಿತಾಮಹ ರೆವರೆಂಡ್ ಮೊಗ್ಲಿಂಗ್ ರವರ ಹೆಸರು ಸರ್ವಕಾಲಕ್ಕೂ ಜೀವಂತವಾಗಿರಲಿದೆ ಎಂದು ಬೆಂಗಳೂರು ಉತ್ತರ ವಿವಿ ಕುಲಪತಿ ಡಾ.ನಿರಂಜನ ವಾನಳ್ಳಿ ಪ್ರತಿಪಾದಿಸಿದರು.

ತಾಲೂಕಿನ ಮಂಗಸಂದ್ರದ ಬೆಂಗಳೂರು ಉತ್ತರ ವಿ.ವಿ. ಸ್ನಾತಕೋತ್ತರ ಕೇಂದ್ರದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದಿಂದ ಪತ್ರಿಕಾ ದಿನಾಚರಣೆ ಉದ್ಘಾಟಿಸಿ ಮಾತನಾಡಿದರು.

ಆದರ್ಶಪ್ರಾಯ ಧ್ಯೇಯಗಳು: ಜರ್ಮನಿ ಯಿಂದ ಭಾರತಕ್ಕೆ ಧರ್ಮಪ್ರಚಾರಕನಾಗಿ ಆಗಮಿಸಿದ ಮೊಗ್ಲಿಂಗ್ ಬಾಸಿಲ್ ಮಿಷನ್ ಪರವಾಗಿ ಕನ್ನಡ ಪತ್ರಿಕೆ ಆರಂಭಿಸುವಾಗ ಹೊಂದಿದ್ದ ಭಾಷಾ ಶುದ್ಧತೆ, ವೈಯಕ್ತಿಕ ನಿಂದನೆಯಿಂದ ದೂರ, ಧರ್ಮ ನಿರಪೇಕ್ಷತೆ, ಅನಾಮಧೇಯ ಪತ್ರಗಳಿಗೆ ಅವಕಾಶ ವಿಲ್ಲವೆಂಬ ಧ್ಯೇಯಗಳು ಇಂದಿನ ಪತ್ರಕರ್ತರಿಗೂ ಆದರ್ಶಪ್ರಾಯವಾ ಗಿವೆಯೆಂದರು.

ಪತ್ರಕರ್ತ ಎಚ್.ಆರ್. ಶ್ರೀಶ ಮಾತನಾಡಿ, ಅಭಿವ್ಯಕ್ತಿ ಸ್ವಾತಂತ್ರ್ಯ ಪತ್ರಕರ್ತ ರಿಗೆ ಮಾತ್ರವಲ್ಲ, ಎಲ್ಲರಿಗೂ ಅನ್ವಯಿಸಲಿದೆ. ಪತ್ರಕರ್ತರು ಆಧುನಿಕ ತಂತ್ರಜ್ಞಾನವನ್ನು ನಿಯಮಾನುಸಾರ ಬಳಸಿಕೊಂಡು ಜ್ಞಾನಪ್ರಸಾರ ಮಾಡಬೇಕು. ಎಲ್ಲಿ ಆಧುನಿಕ ಮಾಧ್ಯಮಗಳಿದ್ದರೂ ಮುದ್ರಣ ಮಾಧ್ಯ ಮದಲ್ಲೀ ಜನತೆ ವಿಶ್ವಾಸ ಹೊಂದಿರುವುದರಿಂದ ಸತ್ಯಾಂಶಕ್ಕೆ ಒತ್ತು, ಸಮಾಜದ ಹಿತಕ್ಕೆ ಆದ್ಯತೆ, ವಿವೇಚನೆಯಿಂದ ಕೂಡಿದ ಬರವಣಿಗೆ, ಖಾಸಗಿತನಕ್ಕೆ ಗೌರವ ನೀಡಬೇಕು. ಹಣ ಸಂಪಾದನೆಗಿಂತ ಪತ್ರಿಕಾಧರ್ಮ ಪಾಲನೆ, ವೃತ್ತಿ ಮನೋಧರ್ಮ ಅನುಭವಗಳಿಗೆ ಗಮನ ಹರಿಸಬೇಕೆಂದು ಕಿವಿಮಾತು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಬಿ.ವಿ.ಗೋಪಿನಾಥ್ ಅವರು ಜ್ಞಾನವಿಕಾಸ, ನಿತ್ಯದ ಆಗುಹೋಗುಗಳ ಅರಿವು, ಭವಿಷ್ಯದ ದಾರಿ ನಿರ್ಧರಿಸುವ ಸಲುವಾಗಿ ಯುವಕರು ಪತ್ರಿಕೆಗಳನ್ನು ಓದಬೇಕು. ಸಾರ್ವಜನಿಕ ಅಭಿಪ್ರಾಯವನ್ನು ಗಟ್ಟಿಯಾಗಿ ಬಿಂಬಿಸುವ ವ್ಯಕ್ತಿಗಳಾಗಿ ಹೊರಹೊಮ್ಮಬೇಕೆಂದೂ ಆಶಿಸಿದರು.

ಪತ್ರಕರ್ತರಿಗೆ ಸನ್ಮಾನ: ಇದೇ ಸಂದರ್ಭದಲ್ಲಿ ಹಿರಿಯ ಪತ್ರಕರ್ತ ಎಂ.ಜಿ.ಪ್ರಭಾಕರ ಹಾಗೂ ಸಾಧಕ ಪತ್ರಕರ್ತ ಎಚ್.ಕೆ.ರಾಘವೇಂದ್ರರನ್ನು ಸನ್ಮಾನಿಸಲಾಯಿತು. ಬೆಂಗಳೂರಪ್ಪರಿಂದ ಪ್ರಾರ್ಥನೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಬಿ.ವಿ. ಚೇತನ್ ಕುಮಾರ್‌ರಿಂದ ಸ್ವಾಗತ, ಗಾಯತ್ರಿ ನಿರೂಪಣೆ ನೆರವೇರಿಸಿದರು. ವೇದಿಕೆ ಕಾರ್ಯಕ್ರಮದ ಬಳಿಕ ವಾರ್ತಾ ಇಲಾಖೆ ನಿರ್ಮಿಸಿರುವ ಡಿ.ವಿ.ಜಿ. ಕುರಿತ ಸಾಕ್ಷ್ಯಚಿತ್ರವನ್ನು ಪ್ರದರ್ಶಿಸಲಾಯಿತು.

ಪೃಥ್ವಿ ಅಸೆಟ್ ರೀಕನ್‌ಸ್ಟ್ರಕ್ಷನ್ ಅಂಡ್ ಸೆಕ್ಯುರಿಟೈಸೇಷನ್ ಕಂಪನಿ ಲಿ.
ನೋಂದಾಯಿತ ಮತ್ತು ಕಾರ್ಪೊರೇಟ್ ಕಛೇರಿ: ಡೋರ್ ನಂ.1-55, ರಾಜಾ ಪ್ರಾಸಾದಮು, 4ನೇ ಮಹಡಿ, ವಿಂಗ್-I, ಮಸ್ಜಿದ್ ಬಂಡಾ ರಸ್ತೆ, ಕೊಂಡಾಪುರ, ಹೈದರಾಬಾದ್-84. CIN: U67120TG2007PLC053327, ದೂರವಾಣಿ: 040-41413333. ಇಮೇಲ್: co@paras.org.in. ವೆಬ್: www.paras.org.in

ಮೆ॥ ವೈಷ್ಣವಿ ಬ್ರಿಕ್ ಇಂಡಸ್ಟ್ರೀಸ್‌ನ ಸ್ಥಿರಾಸ್ತಿಯ ಮಾರಾಟಕ್ಕೆ ಮೊಹರು ಮಾಡಿದ ಟೆಂಡರ್‌ಗಳು-ಕಮ್-ಇ-ಹರಾಜು ಮಾರಾಟ ಆಹ್ವಾನಿಸುವ ಸೂಚನೆ.

ಸೆಕ್ಯುರಿಟೈಜೇಷನ್ ಮತ್ತು ರಿಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ಸ್ ಅಂಡ್ ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ಸ್ (ಸರ್ಫೇಸಿ) ಆಕ್ಟ್ 2002ನ್ನು ಓದಿಕೊಂಡಂತೆ ನಿಯಮ 8(6) ರ ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು, 2002ರ ಅನ್ವಯ ಇ-ಹರಾಜು ಮಾರಾಟ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ಹಾಗೂ ನಿರ್ದಿಷ್ಟವಾಗಿ ಸಾಲಗಾರರಿಗೆ, ಅಡಮಾನದಾರರಿಗೆ ಮತ್ತು ಜಾಮೀನುದಾರರಿಗೆ ಸೂಚನೆ ನೀಡುವುದೇನೆಂದರೆ, ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಗಳನ್ನು ಪೂರಕ ಭದ್ರತಾದಾರರಿಗೆ ಅಡಮಾನ ಮಾಡಿದ್ದು, ಅದನ್ನು ಅಧಿಕೃತ ಅಧಿಕಾರಿಗಳು, ಪೃಥ್ವಿ ಅಸೆಟ್ ರೀಕನ್‌ಸ್ಟ್ರಕ್ಷನ್ ಅಂಡ್ ಸೆಕ್ಯುರಿಟೈಸೇಷನ್ ಕಂಪನಿ ಲಿ. (ಪಿಎಆರ್‌ಎಎಸ್) ಇವರು ಸ್ವಾಧೀನಪಡಿಸಿಕೊಂಡಿದ್ದು, ಪೂರಕ ಭದ್ರತಾದಾರರಾದ (ಪಿಎಆರ್‌ಎಎಸ್) ಇವರಿಗೆ ಮೆ॥ ಸಾಲಗಾರರಾದ ವೈಷ್ಣವಿ ಬ್ರಿಕ್ ಇಂಡಸ್ಟ್ರೀಸ್, ಶ್ರೀ ಎನ್ ಶ್ರೀನಿವಾಸ ಅಡಮಾನುದಾರರು ಕಮ್ ಅಡಮಾನದಾರರು ಮತ್ತು ಶ್ರೀಮತಿ. ಎಸ್ ಭಾವನಾ ರವರಿಂದ ಬರಬೇಕಾದ ಬಾಕಿ ಮೊತ್ತ ರೂ. 9,86,33,408/- (ರೂಪಾಯಿ ಒಂಭತ್ತು ಕೋಟಿ ಎಂಭತ್ತಾರು ಲಕ್ಷದ ಮೂವತ್ತ ಮೂರು ಸಾವಿರದ ಸಾವಿರದ ನಾಲ್ಕು ನೂರ ಎಂಟು ಮಾತ್ರ) ದಿನಾಂಕ : 31.07.2024 ರಂದು ಇದ್ದಂತೆ "ಎಲ್ಲಿ ಹೇಗಿದೆಯೋ ಹಾಗಿನ ಆಧಾರದ ಮೇಲೆ ಯಾವುದೇ ಅವಲಂಬನೆ ಇಲ್ಲದೆ" ದಿನಾಂಕ 28.08.2024 (ಅಂದರೆ ಮಂಗಳವಾರ) ರಂದು ಮಾರಾಟ ಮಾಡಲಿರುವರು. ಇ-ಹರಾಜು ಮೂಲಕ ಮಾರಾಟ ಮಾಡಲಿರುವ ಆಸ್ತಿಗಳ ನಿರ್ದಿಷ್ಟ ವಿವರಗಳನ್ನು ಈ ಕೆಳಗೆ ನೀಡಲಾಗಿದೆ.

ಸೇವಾ ಪೂರೈಕೆದಾರರ ವೆಬ್‌ಸೈಟ್ https://www.bankeauctions.com ಮೂಲಕ "ಆನ್‌ಲೈನ್ ಇ-ಹರಾಜು ಮಾರಾಟ" ವನ್ನು ಅಳವಡಿಸಿಕೊಳ್ಳುವ ಮೂಲಕ ಷೆಡ್ಯೂಲ್ ಆಸ್ತಿಯ ಮಾರಾಟವನ್ನು ನಡೆಸಲಾಗುತ್ತದೆ.

ಇ-ಹರಾಜಿನ ದಿನಾಂಕದ ವಿವರಗಳು, ಬಿಡ್ ಫಾರ್ಮ್ ಸಲ್ಲಿಸಲು ಕೊನೆಯ ದಿನಾಂಕ, ಮೀಸಲು ಬೆಲೆ, ಮುಂಗಡ ಠೇವಣಿ ಮೊತ್ತ, ಬಿಡ್ ಹೆಚ್ಚಳ ಮೊತ್ತ ಮತ್ತು ಇ-ಹರಾಜು ಸಮಯವನ್ನು ಈ ಕೆಳಗೆ ತಿಳಿಸಲಾಗಿದೆ.

ಮೀಸಲು ಬೆಲೆ	: ರೂ. 4,50,00,000/- (ರೂಪಾಯಿ ನಾಲ್ಕು ಕೋಟಿ ಐವತ್ತು ಲಕ್ಷಗಳು ಮಾತ್ರ)
ಇಎಂಡಿ ಮೊತ್ತ	: ರೂ. 45,00,000/- (ರೂಪಾಯಿ ನಲವತ್ತೈದು ಲಕ್ಷಗಳು ಮಾತ್ರ)
ಬಿಡ್ ಸಲ್ಲಿಸುವ ಕೊನೆಯ ದಿನಾಂಕ	: 27.08.2024 ರಂದು (ಮಂಗಳವಾರ) ಸಂಜೆ 4.00 ಗಂಟೆಯ ವರೆಗೆ
ಇ-ಹರಾಜಿನ ದಿನಾಂಕ	: 28.08.2024 (ಮಂಗಳವಾರ)
ಇ-ಹರಾಜಿನ ಸಮಯ	: ಬೆಳಿಗ್ಗೆ 11:30 ಗಂಟೆಯಿಂದ ಮಧ್ಯಾಹ್ನ 12.30 ಗಂಟೆಯ ವರೆಗೆ
ಬಿಡ್ ಹೆಚ್ಚಳ ಮೊತ್ತ	: ರೂ. 5,00,000/- (ಐದು ಲಕ್ಷಗಳು ಮಾತ್ರ)

* ಇ-ಹರಾಜಿನ ಸಮಯ – ಪ್ರತಿಯೊಂದಕ್ಕೂ 5 ನಿಮಿಷಗಳ ಸ್ವಯಂ ವಿಸ್ತರಣೆಯೊಂದಿಗೆ ಅಂದರೆ, ಹರಾಜು ಮುಚ್ಚುವ ಮೊದಲು ಬಿಡ್ ಮಾಡಿದರೆ ಇ-ಹರಾಜು ಅಂತಿಮ ಸಮಯವನ್ನು ತಲಾ 5 ನಿಮಿಷಗಳವರೆಗೆ ವಿಸ್ತರಿಸಲಾಗುತ್ತದೆ.

ಸ್ಥಿರಾಸ್ತಿಯ ವಿವರಣೆ: ಪರಿವರ್ತಿಸಿದ ಭೂಮಿ ಹಳೇ ಸರ್ವೆ ಸಂಖ್ಯೆ: 123, ಪ್ರಸ್ತುತ ಸರ್ವೆ ಸಂಖ್ಯೆ: 706, ವಿಸ್ತೀರ್ಣ 4.00 ಎಕರೆ ಭೂಮಿ, ದೇವರಾಯಸಮುದ್ರ ಗ್ರಾಮ, ಆವಣಿ ಹೋಬಳಿ, ಮುಳಬಾಗಲು ತಾಲ್ಲೂಕು, ಕೋಲಾರ ಜಿಲ್ಲೆ ಮತ್ತು ಚಕ್ಕುಬಂದಿ : ಉತ್ತರಕ್ಕೆ : ಆರ್. ಜಿ. ರಾಮಪ್ಪ ರವರ ಭೂಮಿ, ದಕ್ಷಿಣಕ್ಕೆ : ಶ್ರೀ ಎನ್ ಬಿ ಶ್ರೀನಿವಾಸ ರಾವ್ ರ ಸರ್ವೆ ಸಂ: 123/P22, ಪೂರ್ವಕ್ಕೆ : ಅವನಿ ಕಡೆಗೆ ಸರ್ಕಾರಿ ರಸ್ತೆ; ಪಶ್ಚಿಮಕ್ಕೆ : ಆರ್.ಜಿ.ರಾಮಪ್ಪ ರವರ ಭೂಮಿ;

ಎನ್ಕಂಬರೆನ್ಸ್/ವ್ಯಾಜ್ಯಗಳ ಪಟ್ಟಿ: ಇಲ್ಲ

ಉದ್ದೇಶಿತ ಭಾಗವಹಿಸುವವರು/ಬಿಡ್‌ದಾರರು ವೆಬ್‌ಸೈಟ್ https://www.bankeauctions.com ಮತ್ತು www.paras.org.in/tenders ಮೂಲಕ ಹೋಗಲು ಸೂಚಿಸಲಾಗಿದೆ.

ಇ-ಹರಾಜು ಮಾರಾಟದ ವಿವರವಾದ ನಿಯಮಗಳು ಮತ್ತು ಷರತುಗಳಿಗಾಗಿ ಮತ್ತು ಆನ್‌ಲೈನ್ ನೋಂದಣಿ, ಬಳಕೆದಾರ ಐಡಿ, ಪಾಸ್‌ವರ್ಡ್, ಸಹಾಯ, ಕಾರ್ಯವಿಧಾನ, ಅವರೆ ಬಿಡ್ ಫಾರ್ಮ್‌ಗಳನ್ನು ಸಲ್ಲಿಸಲು ಮತ್ತು ಇ-ಹರಾಜು ಮಾರಾಟ ಪ್ರಕ್ರಿಯೆಯಲ್ಲಿ ಭಾಗವಹಿಸಲು ಇ-ಹರಾಜಿನ ಕುರಿತು ಆನ್‌ಲೈನ್ ತರಬೇತಿ ಇತ್ಯಾದಿಗಳಿಗಾಗಿ ಸೇವಾ ಪೂರೈಕೆದಾರರನ್ನು ಸಂಪರ್ಕಿಸುವ ಅಗತ್ಯವಿದೆ.

ದಿನಾಂಕ : 06.08.2024 — ಸಹಿ/– ಅಧಿಕೃತ ಅಧಿಕಾರಿ
ಸ್ಥಳ : ಹೈದರಾಬಾದ್ — ಪೃಥ್ವಿ ಅಸೆಟ್ ರೀಕನ್‌ಸ್ಟ್ರಕ್ಷನ್ ಅಂಡ್ ಸೆಕ್ಯುರಿಟೈಸೇಷನ್ ಕಂಪನಿ ಲಿ.

ಸಾಲಗಳ ವಸೂಲಾತಿ ನ್ಯಾಯಮಂಡಳಿ-1, ಬೆಂಗಳೂರು
ಬಿ.ಎಸ್.ಎನ್.ಎಲ್. ಕಟ್ಟಡ, 4ನೇ ಮಹಡಿ, ದೂರವಾಣಿ ಮನೆ, ರಾಜಭವನ ರಸ್ತೆ, ಬೆಂಗಳೂರು-01

ಓ.ಎ. ನಂ. 865/2021

ನಡುವೆ : ಕೆನರಾ ಬ್ಯಾಂಕ್, ಯಲ್ಲಂಪಲ್ಲಿ ಶಾಖೆ, ...ಅರ್ಜಿದಾರರು
ಮತ್ತು :
ಶ್ರೀ ಆರ್.ವಿ. ಅಮರನಾರಾಯಣ ರೆಡ್ಡಿ ಮತ್ತು ಇತರರು ....ಪ್ರತಿವಾದಿಗಳು

ಪ್ರತಿವಾದಿಗಳಿಗೆ 1993ನೇ ಸಾಲ ವಸೂಲಾತಿ ನ್ಯಾಯಮಂಡಳಿ ಕಾಯ್ದೆ ನಿಯಮ 23(viii) ರಂತೆ ಪತ್ರಿಕಾ ಪ್ರಕಟಣೆ ಮೂಲಕ ಸಮನ್ಸ್

ಇವರಿಗೆ
ಡಿ2. ಬಿ.ಎನ್. ಅಶೋಕ್ ಕುಮಾರ್
ಬಿನ್ ಎಲ್. ವಿ. ನಾಗರಾಜ್
1ನೇ ಬ್ಲಾಕ್, ಬಾಗೇಪಲ್ಲಿ,
ಚಿಕ್ಕಬಳ್ಳಾಪುರ ಜಿಲ್ಲೆ – 561 207.

1. ಆದಾಗಿ ನಿಮ್ಮಿಂದ ರೂ. 36,25,027/– (ಮೂವತ್ತಾರು ಲಕ್ಷದ ಇಪ್ಪತ್ತೈದು ಸಾವಿರದ ಇಪ್ಪತ್ತೇಳು ರೂಪಾಯಿಗಳು ಮಾತ್ರ) ವಸೂಲಿ ಮಾಡಲು ಸಾಲಗಳ ವಸೂಲಾತಿ ಮತ್ತು ದಿವಾಳಿ ಕಾಯ್ದೆ 1993ರ ಪ್ರಕರಣ 19ರ ಅನ್ವಯ ನಿಮ್ಮ ವಿರುದ್ಧ ಅರ್ಜಿಯೊಂದನ್ನು ಸಲ್ಲಿಸಲಾಗಿದೆ. ಹಾಗೂ ಇದಕ್ಕೆ ತಗಲುವ ಚಾಲ್ತಿ ಹಾಗೂ ಮುಂದಿನ ಬಡ್ಡಿ, ಖರ್ಚು ಮತ್ತು ವೆಚ್ಚ ಇತರೆಗಳನ್ನು ವಸೂಲಿ ಮಾಡುವ ಸಂಬಂಧ ಅರ್ಜಿದಾರರು ಅರ್ಜಿಯನ್ನು ನೀಡಿರುವುದು ಸರಿಯಷ್ಟೆ.

ಈ ಮೇಲ್ಕಂಡ ಪ್ರತಿವಾದಿಗಳಾದ ನೀವು ನ್ಯಾಯಮಂಡಳಿಗೆ ವೈಯಕ್ತಿಕವಾಗಿಯಾಗಲೀ ಅಥವಾ ವಕೀಲರ ಮೂಲಕವಾಗಲೀ ಸಂಬಂಧಿಸಿದ ದಾಖಲೆಗಳ ಜ್ಞಾಪಕ ಪತ್ರವನ್ನು ಈ ಪ್ರಕಟಣೆಯ 30 ದಿನಗಳ ಒಳಗೆ ಅಥವಾ ದಿನಾಂಕ : 10–09–2024 ರಂದು ಬೆಳಿಗ್ಗೆ 10–30 (ಮಧ್ಯಾಹ್ನ) ಘಂಟೆಗೆ ಹಾಜರಾಗಿ ನಿಮ್ಮ ಉತ್ತರವನ್ನು ನೀಡಬೇಕಾಗಿರುತ್ತದೆ. ಪೂರ್ವ ನಿಯೋಜಿತವಾಗಿ ನಮೂದಿಸಿದ ದಿನಾಂಕದಂದು ನೀವು ಹಾಜರಾಗದಿದ್ದಲ್ಲಿ ನಿಮ್ಮ ಅನುಪಸ್ಥಿತಿಯಲ್ಲಿ ವಿಚಾರಣೆಯನ್ನು ಏಲೇ ಮಾಡಲಾಗುವುದು.

ದಿನಾಂಕ 1ನೇ ಏಪ್ರಿಲ್ 2024ರಂದು ನನ್ನ ಸಹಿ ಮತ್ತು ನ್ಯಾಯಮಂಡಳಿ ಮೊಹರಿನೊಂದಿಗೆ ನೀಡಲಾಗಿದೆ.

ಸಹಿ/– ಸಹಾಯಕ ರಿಜಿಸ್ಟ್ರಾರ್
ಸಾಲಗಳ ವಸೂಲಾತಿ ನ್ಯಾಯಮಂಡಳಿ–1
ಬೆಂಗಳೂರು–560001

ಭಾರತೀಯ ಕಂಟೇನರ್ ನಿಗಮ ಲಿಮಿಟೆಡ್
CONTAINER CORPORATION OF INDIA LTD.
ಕಂಟೈನರ್ ಕಾರ್ಪೋರೇಷನ್ ಆಫ್ ಇಂಡಿಯಾ ಲಿಮಿಟೆಡ್
ಒಂದು ನವರತ್ನ ಕಂಪನಿ (ಭಾರತ ಸರ್ಕಾರದ ಅಡಿಯಲ್ಲಿ)
CONCOR — Tele MANAS 14416

ಆನ್‌ಲೈನ್ ಮೂಲಕ ಹರಾಜು ಮಾರಾಟ

No. MSTC/SRO/CONCOR/2/24-25/21066, 21068, 21069&21070 — Dated: 09.08.2024

ಕಾನ್‌ಕಾರ್ ಸಂಸ್ಥೆಯು ತನ್ನ ಪ್ರಾಂತ್ಯಗಳ ವಿವಿಧ ಟರ್ಮಿನಲ್ (ಚೆನ್ನೈ, ಬೆಂಗಳೂರು, ಹೈದರಾಬಾದ್ ಮತ್ತು ವೈಜಾಕ್) ಪ್ರದೇಶ-III (ದಕ್ಷಿಣ) ಗಳಲ್ಲಿ ಲಭ್ಯವಿರುವ ಹಾನಿಗೊಳಗಾದ ದೇಶಿಯ ಕಂಟೈನರ್, ಕಾರ್ಗೋ ಹಾಗೂ ದೇಶಿಯ ಸರಕುಗಳ ಐಟಂಗಳ ಆನ್‌ಲೈನ್ ಹರಾಜು ಮಾರಾಟಕ್ಕಾಗಿ ಅರ್ಜಿಗಳನ್ನು ಆಹ್ವಾನಿಸುತ್ತಿದೆ. ಅಮದಾದ ಕಾರ್ಗೋಗಳಿಗೆ ಸಂಬಂಧಿತ ಇಂಪೋರ್ಟರ್/ಕಂಸೈನಿಗೆ ಇನ್ನಾವುದೇ ಹೆಚ್ಚಿನ ನೋಟೀಸ್ ನೀಡದೇ, 1962 ರ ಕಸ್ಟಮ್ಸ್ ಕಾಯಿದೆಯ ಕಲಂ 48 ರ ಕಟ್ಟುಪಾಡುಗಳಂತೆ ಹರಾಜು ಮಾರಾಟವನ್ನು ವ್ಯವಸ್ಥೆ ಮಾಡಲಾಗಿದೆ ಅಪೀಲ್‌ನ ಅಥವಾ ಘನ ನ್ಯಾಯಾಲಯದ ಮುಂದೆ ಮೊಕದ್ದಮೆ ಇದ್ದ ಪಕ್ಷದಲ್ಲಿ ಏನಾದರೂ ಸಿಂಧುವಾದ ಆಕ್ಷೇಪಣೆ ಇದ್ದಲ್ಲಿ ಈ ಸೂಚನೆ ಪ್ರಕಟಿಸಿದ 7 ದಿನಗಳ ಒಳಗಾಗಿ ಸಲ್ಲಿಸಬೇಕು. ಇಲ್ಲವಾದಲ್ಲಿ ಅಮದುದಾರರಿಗೆ/ಕಂಸೈನಿಗಳಿಗೆ ಯಾವುದೇ ಆಕ್ಷೇಪಣೆಗಳು ಇಲ್ಲವೆಂದು ಪರಿಭಾವಿಸಲಾಗುವುದು ಮತ್ತು ಅಂತಹ ಸರಕುಗಳನ್ನು ಯಾವುದೇ ಸೂಚನೆ ನೀಡದೇ ಮಾರಾಟ ಮಾಡಲಾಗುವುದು. ಹರಾಜನ್ನು ಮೆ॥ ಕಾನ್‌ಕಾರ್‌ಗಾಗಿ ಅಧಿಕೃತ ಇ-ಕಾಮರ್ಸ್ ಸೇವಾ ಪೂರೈಕೆದಾರರಾದ ಮೆ॥ ಎಂಎಸ್‌ಟಿಸಿ ಲಿ., ಮೂಲಕ ಆನ್‌ಲೈನ್ ಹರಾಜು ಪ್ರಕ್ರಿಯೆಯನ್ನು ನಡೆಸಲಾಗುವುದು. ಕಂಟೇನರ್/ಕಾರ್ಗೋಗಳ ಪರಿಶೀಲನೆಗಾಗಿ ಸಂಬಂಧಿಸಿದ ಕಾನ್‌ಕಾರ್ ಟರ್ಮಿನಲ್‌ಗಳಲ್ಲಿ 09.08.2024 ರಿಂದ 19.08.2024 ರವರೆಗೆ ಕಛೇರಿ ಕೆಲಸದ ದಿನಗಳ ಕೆಲಸದ ವೇಳೆ/ ಅವಧಿಯಲ್ಲಿ ಲಭ್ಯವಿರುತ್ತವೆ. ಆನ್‌ಲೈನ್ ಹರಾಜು ನಿಗಧಿತ ಕಾರ್ಯಸೂಚಿಯಂತೆ 20.08.2024 ರಂದು ನಡೆಯಲಿದೆ. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಲಾಗಿನ್ ಆಗಿ www.concorindia.com ನಾಗಲಿ ಅಥವಾ eprocure.gov.in ನಾಗಲಿ ಅಥವಾ www.mstcindia.co.in ಅಥವಾ ಕಾನ್‌ಕಾರ್‌ನ ಸಂಪರ್ಕ ಸಂ. 044-26482192 ಅಥವಾ ಮೆ॥ ಎಂಎಸ್‌ಟಿಸಿ ಲಿ., ದೂರವಾಣಿ ಸಂ. 044-25219004ಗೆ ಕರೆ ಮಾಡಿ ತಿಳಿದುಕೊಳ್ಳಬಹುದು. ಅಥವಾ ಇಮೇಲ್ ಮೂಲಕವಾದರೂ ಸಂಪರ್ಕಿಸಬಹುದು. ಇ-ಮೇಲ್ ವಿಳಾಸ: e-Mail:mhjain@mstcindia.co.in. ಈ ಬಗ್ಗೆ ಮುಂದೆ ಏನಾದರೂ ತಿದ್ದುಪಡಿಗಳು ಬಂದಲ್ಲಿ ಮೇಲಿನ ವೆಬ್‌ಸೈಟ್‌ಗಳಲ್ಲಿ ಮಾತ್ರ, ಬಿಡ್ ಸಲ್ಲಿಸುವ ಕೊನೆಯ ದಿನಾಂಕಕ್ಕೆ ಮುಂಚೆ ಪ್ರಕಟಿಸಲಾಗುತ್ತದೆ. ಆದುದರಿಂದ ಬಿಡ್‌ದಾರರು ವೆಬ್‌ಸೈಟ್‌ನ್ನು ನಿಯಮಿತವಾಗಿ ನೋಡುತ್ತಿರಲು ಕೋರಲಾಗಿದೆ.

ಸಹಿ/- ಪ್ರದೇಶ ಮುಖ್ಯಸ್ಥ-III (ದಕ್ಷಿಣ)

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬೆಳಗಾವಿ

ಕ್ರ.ಸಂ.: ಪಂರಾಇಂ/ವಿಬೆ/ಪಿಬಿ-3/ಟೆಂಡರ-10/2024-25/1231 ದಿನಾಂಕ: 07/08/2024

ಗುತ್ತಿಗೆ ಆಹ್ವಾನ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್)

ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ, ಬೆಳಗಾವಿ ಅಡಿಯಲ್ಲಿ ಐಟಂವಾರು ಗುತ್ತಿಗೆಗಳನ್ನು ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಪಂಚಾಯತ್ ರಾಜ್ ಇಂಜಿನೀಯರಿಂಗ್ ಇಲಾಖೆಯ ಚಾಲ್ತಿ ನೋಂದಾಯಿತ ಗುತ್ತಿಗೆದಾರರಿಗಾಗಿ ಸ್ಟ್ಯಾಂಡರ್ಡ ಟೆಂಡರ ಡಾಕ್ಯೂಮೆಂಟ್ ಕೆ.ಡಬ್ಲ್ಯೂ-1, 2 & 3 ರಲ್ಲಿ ಒಟ್ಟು 15 ಕಾಮಗಾರಿಯ ಟೆಂಡರ್ ಗುತ್ತಿಗೆಯನ್ನು ಕರೆಯಲಾಗಿದ್ದು ಗರಿಷ್ಠ ಹಾಗೂ ಕನಿಷ್ಠ ಅಂದಾಜು ಮೊತ್ತ ಅನುಕ್ರಮವಾಗಿ ರೂ.50.10 ಹಾಗೂ ರೂ. 10.00 ಲಕ್ಷಗಳು ಗರಿಷ್ಠ ಹಾಗೂ ಕನಿಷ್ಠ ಮುಂಗಡ ಠೇವಣಿ ಮೊತ್ತ ಅನುಕ್ರಮವಾಗಿ ರೂ.1,00,200.00 ಹಾಗೂ 12,750.00 ಗಳು ಇರುತ್ತದೆ. ಆಕ್ಷೇಪಣೆಗಳಿದ್ದಲ್ಲಿ ಖುದ್ದಾಗಿ ಕಚೇರಿಗೆ ಹಾಜರಾಗಿ ಸಲ್ಲಿಸುವ ಕೊನೆಯ ದಿನಾಂಕ: 20/08/2024 ಸಂಜೆ 17:28 ರೊಳಗಾಗಿ, ಗುತ್ತಿಗೆದಾರರಿಂದ ಅರ್ಜಿಗಳನ್ನು ಆನ್‌ಲೈನ್ ಮೂಲಕ ಮನವಿ ಮಾಡಿಕೊಳ್ಳುವ ಕೊನೆಯ ದಿನಾಂಕ: 20/08/2024 ಸಂಜೆ 17:30 ಗಂಟೆಯವರೆಗೆ, ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: 22/08/2024 ಸಂಜೆ 11:00 ಗಂಟೆಯ ನಂತರ ಹಾಗೂ ಆರ್ಥಿಕ ಬಿಡ್ ತೆರೆಯುವ ದಿನಾಂಕ: 23/08/2024 ರಂದು 11:30 ಗಂಟೆಗೆ ಇರುತ್ತದೆ. ಪರಿಷ್ಕೃತ ವೇಳಾಪಟ್ಟಿ/ ತಿದ್ದುಪಡಿಗಳು/ ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದವರ ಕಚೇರಿಯಲ್ಲಿ ಹಾಗೂ ಅಂತರ್‌ಜಾಲದ ಮೂಲಕ ವೆಬ್‌ಸೈಟ್ ವಿಳಾಸ www.kppp.karnataka.gov.in ರಲ್ಲಿ ಪಡೆಯಬಹುದು.

ಸಹಿ/- ಕಾರ್ಯನಿರ್ವಾಹಕ ಅಭಿಯಂತರರು
ಪಂ. ರಾ. ಇಂ. ವಿಭಾಗ, ಬೆಳಗಾವಿ

DIP/BGM/RO No. 574/2024-25

ಎಚ್ಚರಿಕೆ-ಈ ಅಂಕಣಗಳಲ್ಲಿ ಜಾಹೀರಾತುಗಳಿಗೆ ಪ್ರತಿಸ್ಪಂದಿಸುವಾಗ ಸಮುಚಿತ ರೀತಿಯಲ್ಲಿ ವಿಚಾರಿಸುವಂತೆ ವಾಚಕರಿಗೆ ಸಲಹೆ ಕೊಡಲಾಗಿದೆ. ಕನ್ನಡಪ್ರಭ ಪಬ್ಲಿಕೇಷನ್ಸ್ ಲಿಮಿಟೆಡ್ ಜಾಹೀರಾತುದಾರರಿಂದ ಮಾಡಲಾದ ಯಾವುದೇ ಕ್ಲೇಮುಗಳಿಗೆ ಹೊಣೆಯಾಗಿರುವುದಿಲ್ಲ. ಮುದ್ರಕ, ಪ್ರಕಾಶಕ, ಸಂಪಾದಕ ಮತ್ತು ಮಾಲೀಕರು ಕನ್ನಡಪ್ರಭ ಪಬ್ಲಿಕೇಷನ್ಸ್ ಲಿಮಿಟೆಡ್ ಇವರು ಅಂತಹ ಕ್ಲೇಮುಗಳು ಅಸತ್ಯವೆಂದು ಕಂಡುಬಂದಲ್ಲಿ ಯಾವುದೇ ಪರಿಣಾಮಗಳಿಗೆ ಜವಾಬ್ದಾರಿ/ಹೊಣೆಯಾಗಿರತಕ್ಕುದಲ್ಲ. ಕನ್ನಡಪ್ರಭ

ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್
(ಒಂದು ನಿಗದಿತ ವಾಣಿಜ್ಯ ಬ್ಯಾಂಕ್)
ನೋಂದಾಯಿತ ಕಚೇರಿ: ದಿ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ.10/1, 11/2 & 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ಪಕ್ಕ, ಚಲ್ಲಘಟ್ಟ, ಬೆಂಗಳೂರು-560071.

ಇ-ಹರಾಜು ಸೂಚನೆ

ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಗಳು,2002ರ ನಿಯಮ 8(6) ಮತ್ತು 9 ರ ನಿಬಂಧನೆಯೊಂದಿಗೆ ಓದಿಕೊಂಡು ಸೆಕ್ಯೂರಿಟೈಜೇಷನ್ ಅಂಡ್ ರಿಕನ್‌ಸ್ಟ್ರಕ್ಷನ್ ಆಫ್ ಫೈನ್ಯಾನ್ಷಿಯಲ್ ಅಸೆಟ್ಸ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿ ಇಂಟರೆಸ್ಟ್ ಆಕ್ಟ್, 2002ರ ಅಡಿಯಲ್ಲಿ ಸ್ಥಿರಾಸ್ತಿ ಸ್ವತ್ತುಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟ ಪ್ರಕಟಣೆ.

ಸರ್ಫೇಸಿ ಕಾಯಿದೆಯ ಸೆಕ್ಷನ್ 13(4) ಅಡಿಯಲ್ಲಿ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯಾಗಿ ಕೆಳಸಹಿದಾರರು ಅಧಿಕಾರಗಳನ್ನು ಚಲಾಯಿಸುವ ಮೂಲಕ ಈ ಕೆಳಗಿನ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ. ಬ್ಯಾಂಕಿಗೆ ಬರಬೇಕಾದ ಬಾಕಿಗಳನ್ನು ಸಾರ್ವಜನಿಕರಿಗೆ ಮತ್ತು ಸಾಲಗಾರರಿಗೆ ಈ ಮೂಲಕ ತಿಳಿಸುವುದೇನೆಂದರೆ ಕೆಳಗೆ ವಿವರಿಸಲಾದ ಅಡಮಾನ ಇಟ್ಟಿರುವ ಸ್ವತ್ತುಗಳನ್ನು ಆನ್‌ಲೈನ್ ಹರಾಜು (ಇ-ಹರಾಜು) ಮೂಲಕ "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಎಲ್ಲಿ ಏನಿದೆಯೋ ಹಾಗೆ" ಈ ಕೆಳಗೆ ನಿಗದಿಪಡಿಸಿದ ದಿನಾಂಕಂದು ಹರಾಜು ಮಾಡಲಾಗುತ್ತದೆ.

ಕ್ರ ಸಂ	ಸಾಲದ ಖಾತೆ ಸಂಖ್ಯೆ	ಸಾಲಗಾರರ/ಸಹ-ಸಾಲಗಾರರ/ ಜಾಮೀನುದಾರರ ಮೂಲ ಹೆಸರು	ಸೂಚನೆ ದಿನಾಂಕ 13-2 ರಂದು	ಸ್ವಾಧೀನ ದಿನಾಂಕ	08.08.2024 ರಂದು ಇದ್ದಂತೆ ಪ್ರಸ್ತುತ ಬಾಕಿ ಮೊತ್ತ	ಆಸ್ತಿಯ ಪರಿಶೀಲನೆಯ ದಿನಾಂಕ ಮತ್ತು ಸಮಯ	ಐಎನ್‌ಆರ್ ಗಳಲ್ಲಿ ಮೀಸಲು ಬೆಲೆ	ಮುಂಗಡ ಠೇವಣಿ (ಐಎನ್‌ಆರ್)	ಇ-ಹರಾಜಿನ ದಿನಾಂಕ ಮತ್ತು ಸಮಯ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ ಮತ್ತು ಸ್ಥಳ
1	45389437246582	1) ಶ್ರೀ ಭಾಲ ಮುರಳಿ ವಿ, 2) ಶ್ರೀಮತಿ ನಾಗವೇಣಿ ವಿ, 3) ಶ್ರೀಮತಿ ಸುನಾದಮ್ಮ	07.01.2023	30.07.2024	ರೂ. 29,17,201.92 (ರೂಪಾಯಿ ಇಪ್ಪತ್ತೊಂಭತ್ತು ಲಕ್ಷದ ಹದಿನೇಳು ಸಾವಿರದ ಇನ್ನೂರ ಒಂದು ಮತ್ತು ತೊಂಭತ್ತೆರಡು ಪೈಸೆ ಮಾತ್ರ)	23.08.2024 ರಂದು ಬೆಳಿಗ್ಗೆ 9:30 ರಿಂದ ಸಂಜೆ 05:00 ಗಂಟೆಯ ವರೆಗೆ	ರೂ. 22,72,000/– (ರೂಪಾಯಿ ಇಪ್ಪತ್ತೆರಡು ಲಕ್ಷದ ಎಪ್ಪತ್ತೆರಡು ಸಾವಿರ ಮಾತ್ರ)	ರೂ.2,27,200/– (ರೂಪಾಯಿ ಎರಡು ಲಕ್ಷದ ಇಪ್ಪತ್ತೇಳು ಸಾವಿರದ ಇನ್ನೂರು ಮಾತ್ರ)	09.09.2024 ಮಧ್ಯಾಹ್ನ 02.00 ಗಂಟೆಗೆ	ದಿನಾಂಕ : 07.09.2024 ರಂದು ಸಂಜೆ 5.00 ಗಂಟೆಯ ವರೆಗೆ ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್, ನೋಂದಾಯಿತ ಕಚೇರಿ: ದಿ ಫೇರ್‌ವೇ, ನೆಲ ಮತ್ತು ಮೊದಲ ಮಹಡಿ, ಸರ್ವೆ ನಂ.10/1, 11/2 & 12/2ಬಿ, ದೊಮ್ಮಲೂರು ಪಕ್ಕ, ಕೋರಮಂಗಲ ಇನ್ನರ್ ರಿಂಗ್ ರಸ್ತೆ, ಇಜಿಎಲ್ ಬಿಸಿನೆಸ್ ಪಾರ್ಕ್ ಪಕ್ಕ, ಚಲ್ಲಘಟ್ಟ, ಬೆಂಗಳೂರು-560071.

ಅಡಮಾನ ಇಟ್ಟಿರುವ ಸ್ಥಿರಾಸ್ತಿ: ಆಸ್ತಿ ನಿವೇಶನ ನಂ.59, ಇ-ಖಾತಾ ನಂ.152800202000500465, ಕುಡುವತಿ ಗ್ರಾಮ, ಕುಪ್ಪಹಳ್ಳಿ ಗ್ರಾಮ ಪಂಚಾಯಿತಿ, ನಂದಿ ಹೋಬಳಿ, ಚಿಕ್ಕಬಳ್ಳಾಪುರ ತಾಲೂಕು ಮತ್ತು ವಿಸ್ತೀರ್ಣ : ಪೂರ್ವದಿಂದ ಪಶ್ಚಿಮಕ್ಕೆ : 13.71 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 9.14 ಮೀಟರ್, ಒಟ್ಟು: 125.41 ಚ.ಮೀ ಮತ್ತು ಚಕ್ಕುಬಂದಿ : ಪೂರ್ವಕ್ಕೆ : ಶ್ರೀ ಅಶ್ವತ್ಥಾಮ ರವರ ಆಸ್ತಿ , ಪಶ್ಚಿಮಕ್ಕೆ: ರಸ್ತೆ, ಉತ್ತರಕ್ಕೆ : ಶಾಲೆ, ದಕ್ಷಿಣಕ್ಕೆ : ಶ್ರೀ ಮುನಿರಾಜಪ್ಪ ರವರ ಆಸ್ತಿ,

ಸ್ವತ್ತುಗಳನ್ನು "ಎಲ್ಲಿ ಹೇಗಿದೆಯೋ ಹಾಗೆ" ಮತ್ತು "ಎಲ್ಲಿ ಏನಿದೆಯೋ ಹಾಗೆ" 'ಆನ್ ಲೈನ್'ನಲ್ಲಿ ಇ-ಹರಾಜು ನಡೆಸಲಾಗುವುದು. ಬ್ಯಾಂಕಿನ ಅನುಮೋದಿತ ಸೇವಾದಾರರಾದ ಮೆ॥ 4 ಕ್ಲೋಸರ್‌ನ ವೆಬ್‌ಸೈಟ್ https://bankauctions.in & www.foreclosureindia.com ಪೋರ್ಟಲ್‌ನಲ್ಲಿ ಹರಾಜು ನಡೆಸಲಾಗುವುದು. ನಿರೀಕ್ಷಿತ ಬಿಡ್ದಾರರು ಸಂಪರ್ಕಿಸಬಹುದು, ಹೆಚ್ಚಿನ ಮಾಹಿತಿ ಮತ್ತು ವಿವರಗಳಿಗಾಗಿ ಸಹಾಯ, ವಿಧಾನ ಮತ್ತು ಇ-ಹರಾಜಿನ ಆನ್‌ಲೈನ್ ತರಬೇತಿಗಾಗಿ ಮೆ॥ 4 ಕ್ಲೋಸರ್, ಶ್ರೀ ಶ್ರೀನಿವಾಸುಲು, ಸಂಪರ್ಕ ಸಂಖ್ಯೆ: 8142000809.

ಇಮೇಲ್ ಐಡಿ: info@bankauctions.in/ srinivas@bankauctions.in ಇವರನ್ನ ಸಂಪರ್ಕಿಸಬಹುದು.

ಇ-ಹರಾಜು ಪ್ರಕ್ರಿಯೆಯಲ್ಲಿ ಭಾಗವಹಿಸಲು ನಿಯಮಗಳು ಮತ್ತು ಷರತ್ತುಗಳ ಕುರಿತು ಹೆಚ್ಚಿನ ವಿವರಗಳಿಗಾಗಿ ಮತ್ತು ಆಸ್ತಿಗೆ ಸಂಬಂಧಿಸಿದ ಯಾವುದೇ ಪ್ರಶ್ನೆಗೆ ದಯವಿಟ್ಟು ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಅಧಿಕೃತ ಅಧಿಕಾರಿಗಳು, ಶ್ರೀ ರಂಜನ್ ನಾಯಕ್ (ಮೊ.ಸಂ.9590858249), ಶ್ರೀ ಉಮೇಶ್ (ಮೊ.ಸಂ.8050149617) ಮತ್ತು ಶ್ರೀಮತಿ ಸಯೀದಾ (ಮೊ.ಸಂ.7400445147) ಅಧಿಕೃತ ಅಧಿಕಾರಿಯವರ ಉತ್ತಮ ತಿಳುವಳಿಕೆ ಮತ್ತು ಮಾಹಿತಿಗಾಗಿ ಇವರನ್ನ ಸಂಪರ್ಕಿಸಬಹುದು, ಆಸ್ತಿಗಳ ಮೇಲೆ ಯಾವುದೇ ಹೊರೆಗಳಿಲ್ಲ. ಆದಾಗ್ಯೂ ಉದ್ದೇಶಿತ ಬಿಡ್‌ದಾರರು ಹೊರೆಗಳಿಗೆ ಸಂಬಂಧಿಸಿದಂತೆ ತಮ್ಮದೇ ಆದ ವಿಚಾರಣೆಗಳನ್ನು ಮಾಡಬೇಕು. ತಮ್ಮ ಬಿಡ್ ಸಲ್ಲಿಸುವ ಮೊದಲು ಇರಿಸಲಾದ ಆಸ್ತಿಯ ಶೀರ್ಷಿಕೆ. ತಮ್ಮ ಬಿಡ್ ಸಲ್ಲಿಸುವ ಮೊದಲು ಆಸ್ತಿಯ ಶೀರ್ಷಿಕೆಯನ್ನು ಹೊಂದಿರಬೇಕು, ಯಾವುದೇ ಷರತ್ತುಬದ್ಧ ಬಿಡ್ ಅನ್ನು ಸ್ವೀಕರಿಸಲಾಗುವುದಿಲ್ಲ. ಅಡಮಾನದ ಆಸ್ತಿಗಳಿಗೆ ನಿಗದಿಪಡಿಸಲಾದ ಇ-ಹರಾಜಿನ ಕುರಿತು ಮೇಲೆ ತಿಳಿಸಲಾದ ಸಾಲಗಾರರು/ಜಾಮೀನುದಾರರು/ ಅಡಮಾನದಾರರಿಗೆ ಈ ಸೂಚನೆಯನ್ನು ನೀಡಲಾಗಿದೆ. ಸಾಲಗಾರರು /ಜಾಮೀನುದಾರರು / ಅಡಮಾನದಾರರಿಗೆ ಹರಾಜಿನ ದಿನಾಂಕದ ಮೊದಲು ಬಡ್ಡಿ ಮತ್ತು ಎಲ್ಲಾ ವೆಚ್ಚಗಳೊಂದಿಗೆ ಮೇಲೆ ತಿಳಿಸಿದಂತೆ ಮೊತ್ತವನ್ನು ಪಾವತಿಸಬೇಕು, ಒಂದು ವೇಳೆ ಉಳಿದಿರುವ ಬಾಕಿ ಮೊತ್ತ ಖರ್ಚು ವೆಚ್ಚಗಳನ್ನು ಮರುಪಾವತಿಸಲು ವಿಫಲರಾದರೆ ಆಸ್ತಿಯನ್ನು ಮಾರಾಟ ಮಾಡಲಾಗುವುದು ಎಂದು ಈ ಸೂಚನೆ ಮೂಲಕ ನೀಡಲಾಗುತ್ತದೆ.

ದಿನಾಂಕ: 09.08.2024, ಸ್ಥಳ: ಚಿಕ್ಕಬಳ್ಳಾಪುರ — ಸಹಿ/– ಅಧಿಕೃತ ಅಧಿಕಾರಿಗಳು, ಜನ ಸ್ಮಾಲ್ ಫೈನಾನ್ಸ್ ಬ್ಯಾಂಕ್ ಲಿಮಿಟೆಡ್